AKSHARASURYA
E-ISSN: 2583-620X
Peer-Reviewed, Multi Lingual E-Journal
Volume – 02, Issue – 03, March 2023.

# ಪಂಪನ ಕಾವ್ಯಗಳಲ್ಲಿ ಮೌಲ್ಯ ವಿವೇಚನೆ

**ವಿಕಾಸ್ ಕುಮಾರ್ ವಿ.**
ಸಂಶೋಧನಾ ವಿದ್ಯಾರ್ಥಿ
ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ
9164381806
vikasakshara1@gmail.com

ಬದುಕನ್ನೇ ಕೇಂದ್ರವಾಗಿರಿಸಿಕೊಂಡು, ಬದುಕಿನಿಂದಲೇ ರೂಪವನ್ನು ಪಡೆದ 'ಕಲೆ', ಇಂದು ಬದುಕಿಗೆ ಅದು ಎಷ್ಟು ಹತ್ತಿರವಾಗಿದೆ, ಬದುಕಿಗೆ ಅದರ ಪ್ರಸ್ತುತತೆ ಎಷ್ಟಿದೆ ಎಂಬುದು ಗಂಭೀರವಾದ ಚರ್ಚೆ. 'ಕಲೆಗಾಗಿ ಕಲೆ'[1] ಎನ್ನುವ ದೃಷ್ಟಿಕೋನ ನಮ್ಮದಲ್ಲ. ಕಲೆ ಬದುಕನ್ನು ಕುರಿತಾದುದು, ಬದುಕಿಗೆ ಸ್ಪಂದಿಸಿದಷ್ಟು, ಹತ್ತಿರವಾದಷ್ಟು ಅದು ಜೀವಂತವಾಗಿರುತ್ತದೆ.

ಕನ್ನಡ ಸೃಜನಶೀಲ ಪರಂಪರೆಯನ್ನು ಗಮನಿಸುವುದಾದರೆ, ಅದು ತನ್ನ ಪರಂಪರೆಯನ್ನು ಅವಲಂಬಿಸಿರುವುದನ್ನು ನಾವು ಕಾಣುತ್ತೇವೆ. ಅದು ಅಂದಿನ ವರ್ತಮಾನದಲ್ಲಿ ನಿಂತು, ತನ್ನತಾತ್ವಿಕ ಮೌಲ್ಯಗಳನ್ನು ಪರಂಪರೆಯಿಂದ ಹುಡುಕುವ, ಅದನ್ನು ತನ್ನ ಸಮಕಾಲೀನ ಬದುಕಿನೊಂದಿಗೆ ಅನುಸಂಧಾನ ನಡೆಸುವ ಪ್ರಕ್ರಿಯೆಯಲ್ಲಿಯೇ ಕನ್ನಡ ಸೃಜನಶೀಲ ಪರಂಪರೆ ರೂಪುಗೊಂಡಿದ್ದು. ಕನ್ನಡ ಸಾಹಿತ್ಯ ತನ್ನ ಆರಂಭಿಕ ಹೆಜ್ಜೆ ಪಡೆದದ್ದೇ ಜೈನಮಾರ್ಗದಿಂದ. ಕನ್ನಡ ಸಾಹಿತ್ಯ ಸಾಗಬೇಕಾದ ಕ್ರಮವನ್ನು, ಒಂದು ದೃಷ್ಟಿಕೋನವನ್ನು ಹಾಕಿಕೊಟ್ಟು ಮಾರ್ಗವನ್ನು ನಿರ್ಮಿಸಿತು. ಜಿನದರ್ಶನವು ಬದುಕಿನ ವಿಭಿನ್ನ ನೆಲೆಗಳ ಬಗ್ಗೆ ಸಹಾನುಭೂತಿಯನ್ನು ಹೊಂದಿದೆ. ಲೋಕವನ್ನು ಅದರ ವೈವಿಧ್ಯತೆಯಲ್ಲಿ ಸೂಕ್ಷ್ಮವಾಗಿ ನೋಡುವ, ಗ್ರಹಿಸುವ ದೃಷ್ಟಿಕೋನ ಜಿನದರ್ಶನಕ್ಕೆ ಇದೆ.

ಒಂದು ಮಹತ್ಕೃತಿ ವರ್ತಮಾನಕ್ಕೆ ಮುಖಾಮುಖಿಯಾಗುವುದರ ಮೂಲಕ ಹಾಗೂ ವರ್ತಮಾನಕ್ಕೆ ಅದು ಪ್ರಸ್ತುತವಾಗುವುದರಿಂದ ಕೃತಿ ತನ್ನ ಸಾರ್ವಕಾಲಿಕತೆಯನ್ನು ಉಳಿಸಿಕೊಳ್ಳುತ್ತೆ. ಕನ್ನಡ ಸಾಹಿತ್ಯದ ಅಗ್ರಗಣ್ಯನಾದ ಪಂಪನ ಕೃತಿಗಳೂ ಇಂತಹ ಸಾರ್ವಕಾಲಿಕತೆಯನ್ನು ಪಡೆದವುಗಳೇ ಆಗಿವೆ. ಪಂಪನೇ ತನ್ನ ಕಾವ್ಯವನ್ನು 'ನಿಚ್ಚಂ ಪೊಸತು' ಎಂದು ಹೇಳುತ್ತಾನೆ. ಅವನ ಕಾವ್ಯ ಎಂದಿಗೂ ಹಳತಾದುದಲ್ಲ ಅದು ನಿತ್ಯವೂ ನೂತನವಾದುದೇ. ವರ್ತಮಾನದ ಬದುಕಿಗೆ ಮೌಲ್ಯಗಳ ತುರ್ತಿದೆ. ಮಾನವನ ಬದುಕು ಮೌಲ್ಯಗಳಿಂದ ಕ್ರಿಯಾಶೀಲವಾಗಬೇಕು. ಮನುಷ್ಯನ ಬದುಕುಯಾವ ಯಾವ ಮೌಲ್ಯಗಳಿಂದ ಕ್ರಿಯಾಶೀಲವಾಗುತ್ತದೆ ಎಂಬ ನೋಟವನ್ನು ಪಂಪ ಸಾವಿರವರ್ಷಗಳ ಹಿಂದೆಯೇ ನಮಗೆ ತಿಳಿಸಿದ್ದಾನೆ. ಈ ಮೌಲ್ಯಗಳ ಹುಡುಕಾಟದಲ್ಲಿ ಪಂಪ ನಮಗೆ ದಾರಿದೀಪನಾಗುತ್ತಾನೆ. "ಸಂಸ್ಕೃತಿ ಒಡಲೊಳಗೆ ಅತ್ಯಂತ ಉನ್ನತ ಮೌಲ್ಯಧಾರಗಳನ್ನು ಸೃಜನಾತ್ಮಕವಾಗಿ, ಅದನ್ನು ಮೈತಳೆಯುವ ಹಾಗೆ ಮಾಡಿದ ಯಶಸ್ಸು ಪಂಪನದು."[2]

ಪಂಪನ ಕಾವ್ಯದ ಅನನ್ಯತೆ ಯಾವುದೆಂದರೆ ತನ್ನ ಕಾಲದಲ್ಲಿ ನಿಂತು ಪರಂಪರೆಯ ಶಿಖರವನ್ನು ವರ್ತಮಾನದೊಂದಿಗೆ ಅನುಸಂಧಾನ ನಡೆಸುವ, ಸಮೀಕರಿಸುವ, ಪರಂಪರೆಯ ಮೂಲಕ ವರ್ತಮಾನವನ್ನು ನೋಡುವ ಅದರೊಂದಿಗೆ ತನ್ನ ವರ್ತಮಾನದಲ್ಲಿ ನಿಂತು ತನ್ನ ವರ್ತಮಾನಕ್ಕೆ ಬೇಕಾದ ಮೌಲ್ಯಗಳನ್ನು ಪರಂಪರೆಯ ನಿಧಿಯೊಳಗೆ ಶೋಧಿಸಿ ಹೆಕ್ಕಿ ಅದರ ಮೂಲಕ ಭವಿಷ್ಯವನ್ನು ರೂಪಿಸಿಕೊಳ್ಳುವ ಕ್ರಮ ಪಂಪನದು. ಒಂದು ಮಹಾಕಾವ್ಯ ಜಗತ್ತಿಗೆ ಇದಕ್ಕಿಂತ ಹೆಚ್ಚಿದನ್ನು ಮತ್ತೇನನ್ನು ಕೊಡಬಲ್ಲದು.

'ಕವಿ' ಒಬ್ಬ ಸಮಾಜ ಜೀವಿ. ಸಮಾಜದ ಒಳಿತು, ಕೆಡುಕು, ನೋವು–ನಲಿವು, ಅನ್ಯಾಯ, ನಿರಾಸೆ ಇವುಗಳೊಂದಿಗೆ ಬದುಕುತ್ತಿರುತ್ತಾನೆ ಜೊತೆಗೆ ಇವುಗಳಿಗೆ ಸ್ಪಂದಿಸುತ್ತಾನೆ, ಪ್ರತಿಕ್ರಿಯಿಸುತ್ತಾನೆ. ಕವಿ ಸಮಾಜದ ಜೊತೆ ಬದುಕುತ್ತಾನೆ, ತನ್ನ ಸಮಕಾಲೀನತೆಯೊಂದಿಗೆ ನಿರಂತರವಾದ ಅನುಸಂಧಾನ ಅವನಿಗಿರುತ್ತದೆ. ಆತ ಸಮಾಜದ ಎಷ್ಟೋ ಸೂಕ್ಷ್ಮ ವಿಷಯಗಳಿಗೆ, ಆದರ್ಶ–ಆಕಾಂಕ್ಷೆಗಳಿಗೆ ಮುಖವಾಣಿಯಾಗಿರುತ್ತಾನೆ.

ತಾನು ಸೇರಿದ ಮತಕ್ಕೆ ನಿಷ್ಠನಾಗಿ ಪಂಪ ಆದಿಪುರಾಣವನ್ನು ರಚಿಸಿದ, ತನ್ನ ಸ್ವಾಮಿ ನಿಷ್ಠೆಗಾಗಿ ಅರ್ಜುನನೊಡನೆ ಸಮೀಕರಿಸಿ ವಿಕ್ರಮಾರ್ಜುನ ವಿಜಯವನ್ನು ರಚಿಸಿದ ಎನ್ನುವುದು ಮೇಲ್ನೋಟಕ್ಕೆ ಅಷ್ಟೇ. ಆತ ಎರಡೂ ಕಾವ್ಯಗಳಲ್ಲಿಯೂ ಲೋಕ ಮೌಲ್ಯವನ್ನೇ ಹೇಳಲು ಹೊರಟಿದ್ದು. "ಬೆಳಗುವೆನಿಲ್ಲಿ ಲೌಕಿಕಮಂ ಅಲ್ಲಿಜಿನಾಗಮಂ' ಎಂಬುದರ ಅರ್ಥ ಸೀಮಿತವಾದುದಲ್ಲ. ಇಲ್ಲಿ 'ಬೆಳಗು' ಎನ್ನುವುದು ಬೆಳಗುವಿಕೆ–ಹೊಳಹು ಎನ್ನುವ ಬದಲು 'ಉಜ್ಜಿನೋಡು'[3] ಎನ್ನುವ ಕ್ರಿಯಾರ್ಥವಾಗಿ ಸ್ವೀಕರಿಸಿದರೆ ಅದರ ಅರ್ಥವ್ಯಾಪ್ತಿ ವಿಸ್ತಾರವಾಗುತ್ತದೆ. ಮನುಷ್ಯನ ಚರಿತ್ರೆಯನ್ನು, ಅನುಭವಗಳನ್ನು ಉಜ್ಜಿನೋಡುವ ಮೂಲಕ ಮೌಲ್ಯಗಳನ್ನು ಕಂಡುಕೊಳ್ಳುವ, ಪುನರ್‌ರೂಪಿಸಿ ಪುನರ್ ಮೌಲೀಕರಿಸುವುದನ್ನು ಈ ಎರಡು ವಿಭಿನ್ನ ಮಾರ್ಗಗಳ ಮೂಲಕ ಪಂಪ ಕೈಗೊಂಡಿದ್ದಾನೆ.

ಪಂಪ ತನ್ನ ಕಾವ್ಯಗಳಲ್ಲಿ ಕಾಲದ ಮೌಲ್ಯ ಹಾಗೂ ಬದುಕಿನ ಮೌಲ್ಯಗಳ ಕುರಿತಾಗಿ ವಿವೇಚನೆ ನಡೆಸಿದ್ದಾನೆ. ಮನುಷ್ಯನ ಸಮಷ್ಠಿಯ ಜೀವನಕ್ಕೂ ಹಾಗೂ ವ್ಯಷ್ಠಿಯ ಜೀವನಕ್ಕೂ ಅಗತ್ಯವಾದ ಮೌಲ್ಯಗಳನ್ನು ಪ್ರತಿಪಾದಿಸಿದ್ದಾನೆ. ಬದುಕಿನ ಬಗೆಗೆ ಪಂಪನ ಧೋರಣೆಗಳೇನು ಎಂಬುದು ಹೀಗಿವೆ.

ಪಂಪ ಮೌಲ್ಯಗಳನ್ನು ಹೇಳುತ್ತಿರುವಾಗ ಆವನು ಯಾವ ಕಾಲದಲ್ಲಿ ನಿಂತು ಮೌಲ್ಯಗಳನ್ನು ಪ್ರತಿಪಾದನೆ ಮಾಡುತ್ತಿದ್ದಾನೆ ಎನ್ನುವ ಅರಿವು ನಮಗೆ ಇರಬೇಕು. ಅವನ ಯುಗಧರ್ಮದ ಅರಿವು ನಮಗೆ ಮುಖ್ಯವಾಗುತ್ತದೆ. ಅದು ವೀರಯುಗ ಯುದ್ಧಗಳ ಕಾಲ. ಪಂಪ ಸ್ವತಃ ಕಲಿಯಾಗಿದ್ದವನು, ಶಸ್ತ್ರ ನಿಪುಣನಾದವನು, ಸ್ವತಃ ಯುದ್ಧದಲ್ಲಿ ಭಾಗಿಯಾದವನು ಆದರೂ ಅವನ ಅಂತರಂಗ ಯುದ್ಧವನ್ನು ನಿರಾಕರಿಸಿದೆ. ವೀರಯುಗದ ಮೌಲ್ಯಗಳನ್ನು ಹೇಳುತ್ತಲೇ ಅದರ ಪರಂಪರೆಯನ್ನು ವಿವರಿಸುತ್ತಲೇ ಯುದ್ಧದ ಹಾನಿಯನ್ನು ಆತ ನಿರಾಕರಿಸುತ್ತಾನೆ. ಭರತ ಬಾಹುಬಲಿಯರ ಯುದ್ಧ ಸಂದರ್ಭಲ್ಲಿ, ಯುದ್ಧ ಅವರಿಬ್ಬರ ನಡುವೆ ಮಾತ್ರ ಅದಕ್ಕಾಗಿ ಸೈನಿಕರು ಹತರಾಗುವುದು ಏತಕೆ ಎಂದು ಮಂತ್ರಿಗಳ ಮೂಲಕ ಹೇಳಿಸುವ ಮಾತು. ಅದು ಯುದ್ಧವನ್ನು ನಿರಾಕರಿಸುವುದೇ ಆಗಿದೆ.

> ವ॥ ಆಗಳುಭಯಬಲಮಂತ್ರಿಮುಖ್ಯರಿವರಿರ್ಬರಂಸುಗಳಪ್ಪೊಡೆ ಚರಮದೇಹಧಾರಿಗಳಿವರ ಯುದ್ಧಮೆಂಬುದತಿಕ್ರೂರಗ್ರಹಯುದ್ಧದ
> ಂತೆ ಸಕಳಪ್ರಜಾವಿನಾಶಕರಮಲ್ಲದೆ ಪೆಜಿತಲ್ತು; ಚತುರಂಗಬಲಯುದ್ಧದೊಳಲ್ಲದೆ ಗೆಲ್ಲ ಸೋಲಮೆಂಬುದಿಲ್ಲ; ಸಮಸ್ತಜನಸಂಹರಣಕಾರಣಮಪ್ಪ
> ರಣದೊಳೇವಂದಪುದೆಂಪು ಧರ್ಮಯುದ್ಧಮನೆ ತಮ್ಮೊಳ್ ಸಮಕಟ್ಟಿ ಮನ್ನಂ ಭರತೇಶ್ವರಚಕ್ರವರ್ತಿಯಲ್ಲಿಗೆವಂದು,[4]

ಯುದ್ಧಗಳ ಪರಂಪರೆಯ ಕಾಲದಲ್ಲಿ ಯುದ್ಧವನ್ನು ನಿರಾಕರಿಸುವುದು ಸಾಮಾನ್ಯವಾದ ಮಾತಲ್ಲ. ಅವಕಾಶ ಸಿಕ್ಕ ಎಡೆಯಲ್ಲಿ ಪಂಪ ತನ್ನ–ಅಂತರಂಗದ ಮಾತನ್ನು ಹೊರಹಾಕಿದ್ದಾನೆ. ಇಲ್ಲಿ ಯುದ್ಧ ವೀರನಿಗೆ ಸ್ಥಾನವಿಲ್ಲ, ಬಾಹುಬಲಿ ಯುದ್ಧದಲ್ಲಿ ವಿಜಯಿಯಾದರು, ಅದನ್ನು ಆತ ತಿರಸ್ಕರಿಸುತ್ತಾನೆ.

ವೈರಾಗ್ಯ ಪ್ರಚೋದನೆಗೊಂಡು ಆತ ಧರ್ಮ ವಿಜಯಿಯಾಗುತ್ತಾನೆ.

ಪಂಪನ ಕಾವ್ಯದಲ್ಲಿ ಕುಲದ ಚರ್ಚೆ ಬಹಳ ಮುಖ್ಯವಾದುದು. ಕರ್ಣನ ಪ್ರಸಂಗದಲ್ಲಿ ಪಂಪ ಅದನ್ನು ವಿಷದೀಕರಿಸಿದ್ದಾನೆ. ಹುಟ್ಟಿನಿಂದಲೇ ಜಾತಿ, ಕುಲಗಳ ನಿರ್ಣಯಗೊಳ್ಳುತ್ತದೆ ಎಂದು ಹೇಳುವ ಸಮಾಜದಲ್ಲಿ ಪಂಪ ಕುಲಕ್ಕೆ ಹೊಸ ವ್ಯಾಖ್ಯಾನವನ್ನೇ ನೀಡುತ್ತಾನೆ.

ಕುಲಮನೆ ಮುನ್ನಮುಗ್ಗಡಿಪಿರೇಂ ಗಳ ನಿಮ್ಮ ಕುಲಂಗಳಾಂತು ಮಾ
ರ್ಮಲೆವನನಟ್ಟಿತಿಂಬುವೆ ಕುಲಂ ಕುಲಮಲ್ತು ಚಲಂ ಕುಲಂ ಗುಣಂ
ಕುಲಮಭಿಮಾನಮೊಂದೆ ಕುಲಮಣ್ಮು ಕುಲಂ ಬಗೆವಾಗಳೀಗಳೀ
ಕಲಹದೊಳಣ್ಣ ನಿಮ್ಮ ಕುಲವಾಕುಲಮಂ ನಿಮಗುಂಟುಮಾಡುಗುಂ॥[5]

ಕುಲ ಯಾವುದೆಂದರೆ ಛಲ, ಸದ್ಗುಣ, ಆತ್ಮಗೌರವ, ಪರಾಕ್ರಮ ಇವುಗಳು ಕುಲವೆಂದು ಹೊಸ ಭಾಷ್ಯವನ್ನೇ ಬರೆಯುತ್ತಾನೆ. ದುರಂತ ಪಾತ್ರವಾದ ಕರ್ಣನ ಬಗೆಗಿನ ಸಹಾನುಭೂತಿ ಅನುಪಮವಾದುದು. ಕರ್ಣನ ಅವಸಾನದ ಕಾಲದಲ್ಲಿ ಪಂಪ ಚಿತ್ರಿಸಿರುವ ಪದ್ಯ ಅವನ ಚರಮಗೀತೆ. ಭಾರತದಲ್ಲಿ ನೆನೆಯಬೇಕಾದರೆ ಅದು ಕರ್ಣನನ್ನು ಮಾತ್ರವೇ, ಅವನಿಂದಲೇ ಭಾರತವು ಅನುಪಮ ಎಂದಿರುವ ಮಾತು ನಿಜಕ್ಕೂ ಪಂಪ ನಿಜ ಪರಾಕ್ರಮ, ನಿಜ ಶೌರ್ಯ, ನನ್ನಿಗೆ ನೀಡಿರುವ ಮಹತ್ವವೇ ಆಗಿದೆ.

"ಎಲ್ಲೆಲ್ಲಿ ಪ್ರತಿಭಟನೆ, ಕ್ರಾಂತಿಯ ಕೂಗು ಸಾಮಾಜಿಕ ಸಾಹಿತ್ತಿಕ ಸಂನಿವೇಶಗಳಲ್ಲಿ ಸಿಡಿದೆದ್ದಿಯೊ ಅಲ್ಲಿ ಸ್ವಂತವಾದ ಜೀವನ ಶೋಧದಿಂದ ನಡೆದು ಬಂದ ನಂಬಿಕೆಗಳು ಅಲುಗಾಡಿವೆ. ಹೊಸ ನಂಬಿಕೆಗಳು ಹುಟ್ಟುಕೊಂಡಿವೆ, ಈ ಹಿನ್ನೆಲೆಯಲ್ಲಿ ನೋಡಿದರೆ ತನ್ನ ವಿಶಿಷ್ಟ ಪರಿಸರದಲ್ಲಿ ಮತ್ತು ಮನೋಧರ್ಮದಲ್ಲಿ ಪಂಪನು ತನ್ನ ಅನುಭವ ಅಭಿವ್ಯಕ್ತಿಗಳ ಇಡಿತನವನ್ನು ಒಟ್ಟಾಗಿ ತನ್ನ ಕೃತಿಗಳಲ್ಲಿ ಮೂಡಿಸಿರುತ್ತಾನೆ."[6] ಎಂದು ಅಭಿಪ್ರಾಯ ಪಡುವ ರಂ.ಶ್ರೀ. ಮುಗಳಿಯವರ ಮಾತು ನಿಜ ಪಂಪ ಎಲ್ಲೆಲ್ಲಿ ಪ್ರಭಟಿಸಲು ಅವಕಾಶವಿದೆಯೋ ಅಲ್ಲಿ ಆತ ಪ್ರಭುತ್ವದ, ಸಮಾಜದ ಕಟ್ಟಳೆಯ ವಿರುದ್ಧ ಆತ ಧ್ವನಿ ಎತ್ತಿದ್ದಾನೆ.

ತಾನು ಲೌಕಿಕದಲ್ಲಿ ಆದರ್ಶಗಳೆಂದು ನಂಬಿರುವವ ಮೌಲ್ಯಗಳನ್ನು ಸಮಸ್ತ ಭಾರತದ ವೀರರಲ್ಲಿ ಕಂಡು ಚಿತ್ರಿಸಲು ಯತ್ನಿಸಿದ್ದಾನೆ. ಒಂದೊಂದು ಮೌಲ್ಯಕ್ಕೂ ಒಂದೊಂದು ರೂಪಕೊಟ್ಟು ಚಿತ್ರಿಸಿದ್ದಾನೆ.

ಚಲದೊಳ್ ದುರ್ಯೋಧನಂ ನನ್ನಿಯೊಳಿನತನಯಂ ಗಂಡಿನೊಳ್ ಭೀಮಸೇನಂ
ಬಲದೊಳ್ ಮದ್ರೇಶನತ್ಯುನ್ನತಿಯೊಳಮರಸಿಂಧೂದ್ಭವಂ ಚಾಪವಿದ್ಯಾ
ಬಲದೊಳ್ ಕುಂಭೋದ್ಭವಂ ಸಾಹಸದ ಮಹಿಮೆಯೊಳ್ ಫಲ್ಗುಣಂ ಧರ್ಮದೊಳ್ ನಿ
ರ್ಮಲ ಚಿತ್ತಂಧರ್ಮಪುತ್ರಂ ಮಿಗಿಲಿವರ್ಗಳಿನೀ ಭಾರತಂ ಲೋಕಪೂಜ್ಯಂ॥[7]

ದುರ್ಯೋಧನ ಪಾಂಡವರಿಗೆ ಕೆಡುಕನ್ನೇ ಮಾಡಿರಲೀ, ಸ್ತ್ರೀಗೆ ಅವಮಾನವನ್ನೇ ಮಾಡಿರಲಿ ಅವನಲ್ಲಿ ದುಷ್ಟತನಗಳಿದ್ದರೂ ಅವನಲ್ಲಿ ಕಲಿಯಬೇಕಾದ ಗುಣವಿದೆ ಅದುವೇ ಚಲ. ತನ್ನೊಂದಿಗಿರುವ ಹಿರಿಯರೆಲ್ಲರ ಆಶೀರ್ವಾದ ಪಾಂಡವರ ಮೇಲಿದೆ, ಅವನ ಕಡೆ ಇರುವವರೆಲ್ಲಾ (ಕರ್ಣ, ಶಕುನಿ, ದುಶ್ಯಾಸನ ಹೊರತುಪಡಿಸಿ) ಪಾಂಡವರ ಪಕ್ಷಪಾತಿಗಳೇ ಆದರೂ ಯುದ್ಧದ ನಿರ್ಧಾರದಿಂದ ಹಿಂದೆ ಸರಿಯಲಿಲ್ಲ. ಆ ವಿಶ್ವಾಸ, ಚಲ ಇದು ದುರ್ಯೋಧನನ ಮೂಲಕ ಭಾರತ ಕಲಿಯಬೇಕಾಗಿರುವುದು. ಕರ್ಣನ ನನ್ನಿ, ಕೊಟ್ಟ ಮಾತಿಗಾಗಿ ಅವನು ತನ್ನ ಪ್ರಾಣವನ್ನೇ ನೀಡುತ್ತಾನೆ, ಭೀಮನ ಪೌರುಷ, ಶಲ್ಯನ ಬಲ, ಉನ್ನತಿಯಿಂದ ಬದುಕಿದ ಭೀಷ್ಮ, ವಿದ್ಯಾಬಲದ ದ್ರೋಣ, ಸಾಹಸದಲ್ಲಿ ಅರ್ಜುನ, ಧರ್ಮ ನಿಷ್ಠೆಯಲ್ಲಿ ಧರ್ಮರಾಯ ಇವರಿಂದಲೇ ಭಾರತವು ಲೋಕಪೂಜ್ಯವಾಗಿದೆ ಎಂದು ಪಂಪ ಷರಾ ಬರೆಯುತ್ತಾನೆ. ಪಂಪನ ಮೌಲ್ಯ ನಿರ್ಣಯ ನಿಷ್ಪಕ್ಷವಾದುದು, ತನ್ನ ಸ್ವಾಮಿಯನ್ನು ಅರ್ಜುನನೊಡನೆ ಸಮೀಕರಿಸಿ, ಅರ್ಜುನನ್ನು ನಾಯಕನನ್ನಾಗಿ ಮಾಡಿ ಕೊನೆಗೆ ಅವನಿಗೆ ಪಟ್ಟಕಟ್ಟುವ ಪಂಪ ಕೇವಲ ಅವನಿಂದಲೇ ಭಾರತ ಲೋಕಪೂಜ್ಯವೆಂದು ಅವನಿಂದಲೇ ಭಾರತ ರಸಾಯನವಾದದ್ದು ಎಂದು ಹೇಳಲಿಲ್ಲವೇಕೆ, ಕಾರಣ ಜೀವನವನ್ನು ಸಮಗ್ರವಾಗಿ ನೋಡುವ ಪಂಪನ ದೃಷ್ಟಿಕೋನ ಇದಕ್ಕೆ ಕಾರಣ.

ಆ ಯುಗಕ್ಕೆ ಅನಿವಾರ್ಯವಾದ ಮೌಲ್ಯಗಳನ್ನು ಪಾತ್ರಗಳ ಮೂಲಕ ಜೀವಂತವಾಗಿ ಕಟ್ಟಿಕೊಟ್ಟಿದ್ದಾನೆ. "ಯಾವ ವ್ಯಕ್ತಿಗಳಿಂದ ಭಾರತವು ಲೋಕ ಪೂಜ್ಯವಾಗಿರುವುದೋ ಆ ವ್ಯಕ್ತಿಗಳು ಪಂಪನ ಸಮಕಾಲೀನ ಸಾಮಾಜಿಕ ಮೌಲ್ಯಗಳ ಪ್ರತಿನಿಧಿಯೂ ಹೌದು."[8]

ಪಂಪ ಈ ಲೋಕ ಮೌಲ್ಯಗಳ ಜೊತೆಗೆ ಬದುಕಿನ ಮೌಲ್ಯಗಳನ್ನು ಕುರಿತು ಮನೋಜ್ಞವಾಗಿ ಹೇಳಿದ್ದಾನೆ. ಪಂಪನಿಗೆ ಬದುಕು ಬಹಳ ಮುಖ್ಯ ಹಾಗಾಗಿ ಆ ಬದುಕು ಯಾವ ಯಾವ ಮೌಲ್ಯಗಳಿಂದ ಕೂಡಿರಬೇಕೆಂದು ವಿವರಿಸಿದ್ದಾನೆ.

ಚಾಗದ ಭೋಗದಕ್ಕರದಗೇಯದಗೊಟ್ಟಿಯಲಂಪಿನಿಂಪುಗ
ಳ್ಗಾಗರವಾದ ಮಾನಸರೆ ಮಾನಸರಂತವರಾಗಿ ಪುಟ್ಟಲೇ. . .[9]

ಮನುಷ್ಯನೆಂದರೆ ಅವನಿಗೆ ತ್ಯಾಗದ ಗುಣವಿರಬೇಕು, ತ್ಯಾಗವೆಂದರೆ ಜೀವನದ ಎಲ್ಲದರ ತ್ಯಾಗವಲ್ಲ ಆ ತ್ಯಾಗದ ಜೊತೆ ಭೋಗವೂ ಇರಬೇಕು. ಕೇವಲ ವಿಲಾಸಿಯಾದರೆ ಮಾತ್ರ ಬದುಕಲ್ಲ. ಬದುಕಲು ವಿದ್ಯೆಯ ಅವಶ್ಯಕತೆಯೂ ಇದೆ. ಅದರ ಜೊತೆಗೆ ಲಲಿತ ಕಲೆಗಳಾದ ಸಂಗೀತದ ತನ್ಮಯತೆಯೂ ಬದುಕಿಗೆ ಇರಬೇಕು. ವಿದ್ವತ್ ಜನರ ಜೊತೆ ಗೋಷ್ಠಿಯೂ ಸಹ ಜೀವನಕ್ಕೆ ಮುಖ್ಯ. ಈ ಗುಣಗಳನ್ನು ಹೊಂದಿರುವವರೇ ಮನುಷ್ಯರು ಎನ್ನುತ್ತಾನೆ ಪಂಪ. 'ಮಾನಸರೆ ಮಾನಸರ್' ಎಂಬುದು ಇಂಥ ಮನುಷ್ಯರು ಮಾತ್ರವೇ ಮನುಷ್ಯರು ಎಂದು ಮನುಷ್ಯ ಎನ್ನುವ ಪರಿಭಾಷೆಗೆ ಆತ ನೀಡಿದ ಸಾರ್ವಕಾಲಿಕವಾದ ವ್ಯಾಖ್ಯಾನವಾಗಿದೆ.

ಇನ್ನೊಂದು ಸಂದರ್ಭದಲ್ಲಿ ಅರ್ಜುನ ಕೃಷ್ಣನೊಡನೆ ಸಂವಾದ ಮಾಡಿತ್ತಿರುವ ಸಂದರ್ಭದ ಮಾತು ಹೀಗಿದೆ.

ಒತ್ತಿ ತುಱುಂಬಿ ನಿಂದರಿಪು ಭುಜ ಸಮಾಜದ ಬೇರ್ಗಳಂ ನಭ
ಕ್ಕೆತ್ತದೆ ಬಂದುತನ್ನ ಮಱೆವೊಕ್ಕೊಡೆ ಕಾಯದೆ ಚಾಗದೊಳ್ಪಿನ।
ಜ್ಜೊತ್ತದೆ ಮಾಣ್ದು ಬಾಟ್ವ ಪುಟವಾನಸನೆಂಬನಜಾಡಮೆಂಬುದೊಂ
ದತ್ತಿಯ ಪೆಣ್ನೊಳಿರ್ಪ ಪುಟುವಲ್ಲದೆ ಮಾನಸೇ ಮುರಾಂತಕಾ॥[10]

ಮಿನಿಯಿಸಿದಂ ಕರಂರಿಡಿಯನಪ್ಪುದು ಬೇಟ್ಟಿನ ಬೇಟ್ಟಿ ವಸ್ತು ಕಾಂ
ಚನಗಿರಿಯಿಂದಮಗ್ಗಳಮೆನಿಪ್ಪುದದಾದೊಡಮೇನೊಜೀವಮು
ಳ್ಳಿನಮಿಜೆದರ್ಥಮಿಳ್ಳಿನೆಗಮಿತ್ತು ನೆಗಟ್ತೆಯನಾಂಪುದೆಂಬ ಪೆಂ
ಪಿನ ಸಮಕಟ್ಟುಕಣ್ಗೆದೊರೆಯಾರರಿಕೇಸರಿ ನಿನ್ನವೋಲ್ ಪೆಱಂ॥[11]

ಪಂಪನ ದೃಷ್ಟಿಯಲ್ಲಿ ಒಬ್ಬನು ಮನುಷ್ಯನೆಂದು ಕರೆಸಿಕೊಳ್ಳಲು ಅರ್ಹನಾಗಬೇಕಾದರೆ ಆತ ತ್ಯಾಗದ ಆಗರವಾಗಿರಬೇಕು, ನಂಬಿಬಂದವರಿಗೆ ನೆರವು ನೀಡಬೇಕು, ಬೇಡಿ ಬಂದವನಿಗೆ ಹೆಗಲಾಗಿ ನಿಲ್ಲಬೇಕು, ಕೊಟ್ಟಮಾತಿಗೆ ತಪ್ಪಬಾರದು ಇಲ್ಲವಾದರೆ ಅವನು ಮನುಷ್ಯನೆನಿಸದೆ ಹುಳುವಿಗೆ ಸಮಾನನಾಗುತ್ತಾನೆ ಎಂದು ಅರ್ಜುನನಿಂದ ಹೇಳಿಸುತ್ತಾನೆ. ಮುಂದುವರೆದು ಕೃಷ್ಣನಿಂದ ಬೇಡುವವನು ಬೇಡಿದ ವಸ್ತು ಮೇರುಪರ್ವತಕ್ಕಿಂತಲೂ ಅತಿಶಯವಾದರೂ ಪ್ರಾಣವಿರುವವರೆಗೂ ಶೌರ್ಯದಿಂದದಾನ ಮಾಡಬೇಕೆಂದು ಹೇಳುತ್ತಾನೆ.

ಲೌಕಿಕ ಬದುಕನ್ನುಕುರಿತಾಗಿ ಪಂಪ ಕೇವಲ ತನ್ನ ಭಾರತದಲ್ಲಿ ಮಾತ್ರವಲ್ಲ ಆದಿಪುರಾಣದಲ್ಲಿಯೂ ವಿವರಿಸಿದ್ದಾನೆ. ಜಿನನಾದ ಆದಿನಾಥನ ಬದುಕೇಕಾವ್ಯದ ಜೀವಾಳವಾದರೂ ಅವನ ಕಾಳಜಿ ಇರುವುದು ಮನುಷ್ಯನ ಜೀವನದ ಮೇಲೆ ಅದು ಕೇವಲ ವೈರಾಗ್ಯದ ಕಥೆಯಲ್ಲ ಭೋಗ–ಯೋಗ ಸಮನ್ವಯದಕಥೆ.

ಭವರಾಶಿನಿಮಗ್ನರಂದಯೆದಮಂದಾನಂತಪಂ ಶೀಲಮೆಂ
ಬಿವೆ ಮೆಯ್ಯಾಗಿರೆ ಸಂದಧರ್ಮಮೆ ವಲಂ ಪೊತ್ತೆತ್ತುಗುಂ ಮುಕ್ತಿಪ
ರ್ಯವಸಾನಂಬರಮಾನುಷಂಗಿಕಫಲಂ ಭೂಪೇಂದ್ರದೇವೇಂದ್ರರಾ
ಜ್ಯವಿಳಾಸಂ ಪೆಱತಲ್ತು ನಂಬು ಖಚರಕ್ಷ್ಮಾಪಾಲಚೂಡಾಮಣೀ॥[12]

ಮನುಷ್ಯನ ಬದುಕನ್ನು ಮೇಲೆತ್ತುವ ಗುಣಗಳು ಯಾವುವೆಂದರೆ, ದಯೆ, ದಾನ, ತಪ ಹಾಗೂ ಶೀಲ ಇವು ಕೇವಲ ಯಾವುದೋ ಒಂದು ಮತಕ್ಕೆ ಮಾತ್ರ ಸೀಮಿತವಾದುದಲ್ಲ. ಇವುಗಳನ್ನು ಯಾವ ಮತಗಳೂ ಕೂಡ ಅಲ್ಲಗೆಳೆಯುವುದಿಲ್ಲ ಸಕಲಜೀವಿಗಳಲ್ಲಿಯೂ ಇರಬೇಕಾದುದು, ತಾನು ಬದುಕುವ ತನ್ನಂತೆ ಇತರರಿಗೂ ಬದುಕಲು ಅನುವು ಮಾಡಿಕೊಡುವ ಜೀವಪರವಾದ ನಿಲುವೇ ದಯೆ. ಮನುಷ್ಯಪರ ಕಾಳಜಿಯಿಂದ ಬರುವುದೇ ದಾನ. ಮನುಷ್ಯನ ಚಾರಿತ್ರ್ಯದ ಶುದ್ಧತೆಯೇ ಶೀಲ. ಇವುಗಳಿಂದಲೇ ಸಮಾಜ ಉನ್ನತ ಸ್ಥಾನವನ್ನು ಸಾಮರಸ್ಯವನ್ನು ಕಾಣುವುದು. "ದಯಾದಮಾದಿಗಳ ವೈಕಲ್ಯದಿಂದಲೂ ಧರ್ಮವಿಕಾಸ ಕುಗ್ಗಿ ಹೋಗುತ್ತದೆ."[13] ಎಂದು ಮುಳಿಯ ತಿಮ್ಮಪ್ಪಯ್ಯ ಅವರು ಹೇಳುವುದು ಒಪ್ಪುವ ಮಾತಾಗಿದೆ.

ಪಂಪ ತನ್ನ ಕಾಲದ ಒಟ್ಟು ಅನುಭವಗಳನ್ನು ತನ್ನ ಕಾವ್ಯಗಳ ಮೂಲಕ ಕಟ್ಟಿಕೊಟ್ಟಿದ್ದಾನೆ. ಅವನು ವಾಸ್ತವವಾಗಿ ಹೇಳಲು ಹೊರಟಿರುವು ಧರ್ಮ 'ಅರಿವಂ ಪೊಸಯಿಸುವುದೇ ಧರ್ಮ' ಎಂದು. ತನ್ನ ಒಂದು ಕೃತಿಯಲ್ಲಿ ಜಿನಧರ್ಮದ ವೈರಾಗ್ಯವನ್ನು, ಮತ್ತೊಂದರಲ್ಲಿ ಯುದ್ಧದ ವರ್ಣನೆಯೇ ಅವನಿಗೆ ಮುಖ್ಯವಲ್ಲ, ಎರಡು ವಿಭಿನ್ನ ಮಾರ್ಗಗಳ ಮೂಲಕ ಮನುಷ್ಯ ಕುಲ ಒಂದೇ ಎಂಬುದನ್ನು ಹೇಳಲು ಹೊರಟ ಪಂಪ, ಈ ಮನುಷ್ಯರಿಗೆ ಇರಬೇಕಾದ ದಯೆ, ದಾನ, ತಪ, ಶೀಲ, ತ್ಯಾಗ ಇವುಗಳನ್ನು ಪ್ರತಿಪಾದಿಸಲು ಹೊರಟಿದ್ದಾನೆ ಇವುಗಳ ಜೊತೆಗೆ ಶೌರ್ಯ, ಸಾಹಸ ಇವುಗಳನ್ನು ಹೇಳಿದ್ದಾನೆ. ಅವನ ಧರ್ಮಕ್ಕೆ ಮಾತೃತ್ವದ ಛಾಯೆ ಇದೆ. ಅದು ಸಮಗ್ರತೆಯನ್ನು ಒಳಗೊಂಡ ವಿಸ್ತಾರವಾದ ನೋಟ. 'ಬೆಳಗುವೆನಿಲ್ಲಿ ಲೌಕಿಕಮನಲ್ಲಿ ಜಿನಾಗಮಂ' ಎಂದು ಭೋಗ–ಯೋಗ ಸಮನ್ವಯವನ್ನು ಸಾಧಿಸಿದ್ದಾನೆ. ಸಮಾಜವನ್ನು ಬೆಳಗಿಸಬಹುದಾದ ಮೌಲ್ಯಗಳನ್ನು ನೀಡಿದ್ದಾನೆ, ಮೌಲ್ಯಗಳನ್ನು ಕಳೆದುಕೊಳ್ಳುತ್ತಿರುವ ಈ ಸಮಯದಲ್ಲಿ ಪಂಪನ ಕಾವ್ಯಗಳು ನಮಗೆ ಮಾನವೀಯ ಮೌಲ್ಯಗಳನ್ನು ತಿಳಿಸುತ್ತವೆ. ಈ ಮೌಲ್ಯಗಳನ್ನು ತಿಳಿಸಿದುದರಿಂದಲೇ ಪಂಪ 'ನಾಡೋಜ'ನಾಗಿರುವುದು.

**ಅಡಿಟಿಪ್ಪಣಿ:**

1. Art for art's sake, 19ನೇ ಶತಮಾನದ ಉತ್ತರಾರ್ಧದಲ್ಲಿ ಫ್ರೆಂಚ್ ತತ್ವಜ್ಞಾನಿ ವಿಕ್ಟರ್ ಕಸಿನ್‌ರಿಂದ ರೂಪುಗೊಂಡ ಪರಿಕಲ್ಪನೆ. ಶುದ್ಧಕಲೆಯು ಯಾವುದೇ ನೀತಿ ಬೋಧಕ, ನೈತಿಕ, ರಾಜಕೀಯ ಅಥವಾ ಪ್ರಯೋಜನಕಾರಿ ಕಾರ್ಯದಿಂದ ವಿಚ್ಛೇದನಗೊಂಡಿರುತ್ತದೆ. ಕಲೆ ಕೇವಲ ಸೌಂದರ್ಯ ಪ್ರಜ್ಞೆಗಾಗಿ ಮಾತ್ರ ಎಂಬ ನಿಲುವು.
2. ಬಸವರಾಜಕಲ್ಗುಡಿ, ಆದಿಪುರಾಣ ಸಾಂಸ್ಕೃತಿಕ ಮುಖಾಮುಖಿ, ಪು.94.
3. ಬಸವರಾಜಕಲ್ಗುಡಿ, ಆದಿಪುರಾಣ ಸಾಂಸ್ಕೃತಿಕ ಮುಖಾಮುಖಿ, ಪು.95.
4. ಆದಿಪುರಾಣ , ವ. ಪು.578.
5. ಪಂಪ ಭಾರತ 10.21.
6. ರಂ.ಶ್ರೀ.ಮುಗಳಿ, ಸ.ಕ.ಸಾ 133.
7. ಪಂಪ ಭಾರತ 14.64.
8. ಚಿದಾಂದ ಮೂರ್ತಿ, ಹೊಸತು ಹೊಸತು.
9. ಪಂಪ ಭರತ 4.29.
10. ಪಂಪ ಭಾರತ 5.75.
11. ಪಂಪ ಭಾರತ 5.77.
12. ಆದಿ ಪುರಾಣ 2.7.
13. ಮುಳಿಯ, ತಿಮ್ಮಪ್ಪಯ್ಯ ನಾಡೋಜ ಪಂಪ ಪು.221.

**ಪರಾಮರ್ಶನ:**


1. ಪಂಪ ಭಾರತ, (ಸಂ.) ಎನ್. ಅನಂತರಂಗಾಚಾರ್, ಕನ್ನಡ ಸಾಹಿತ್ಯ ಪರಿಷತ್ತು, 2016.
2. ಆದಿಪುರಾಣ (ಸಂ.) ಕೆ. ಎಲ್. ನರಸಿಂಹ ಶಾಸ್ತ್ರಿ, ಕನ್ನಡ ಸಾಹಿತ್ಯ ಪರಿಷತ್ತು, 2016.
3. ನಾಡೋಜ ಪಂಪ, ಮುಳಿಯ ತಿಮ್ಮಪ್ಪಯ್ಯ, ಗೀತಾ ಬುಕ್ ಹೌಸ್, 1997.
4. ಹೊಸತು ಹೊಸತು, ಎಂ. ಚಿದಾನಂದ ಮೂರ್ತಿ, ಸಪ್ನ ಬುಕ್ ಹೌಸ್, 2018.
5. ಸಮಗ್ರಕನ್ನಡ ಸಾಹಿತ್ಯಚರಿತ್ರೆ, ಸಂ 2, (ಸಂ.) ಜಿ. ಎಸ್. ಶಿವರುದ್ರಪ್ಪ,1 975.
6. ಆದಿಪುರಾಣ ಸಾಂಸ್ಕೃತಿಕ ಮುಖಾಮುಖಿ, (ಸಂ.) ಬಿ. ಎಂ. ಪುಟ್ಟಯ್ಯ, ಹಂಪಿ ಪ್ರಸಾರಾಂಗ, 2015.